ಸಿ ಸಿ ನಂ. **1375/2021**

**ಪಿಡಬ್ಲ್ಯೂ - 1 ಎಂ ಎಂ ಪೆಮ್ಮಯ್ಯ**

**ದಿನಾಂಕ 21.12.2022 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮ್ಯುಖ್ಯ ವಿಚಾರಣೆ - ಶ್ರೀಮತಿ. ಸಿ ಬಿ ಎ ಪಿರ್ಯಾದಿ ಪರ ವಕೀಲರಿಂದಃ**

ನಾನು ಪಿರ್ಯಾದಿ ಬ್ಯಾಂಕ್‌ನ ವ್ಯವಸ್ಥಾಪಕನಾಗಿ ದಿನಾಂಕ 14-04-2022 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಬ್ಯಾಂಕ್ ನ ಪರವಾಗಿ ಈ ಪ್ರಕರಣದಲ್ಲಿ ಸಾಕ್ಷಿ ನೀಡಲು ನನಗೆ ಅಧಿಕಾರ ಪತ್ರವನ್ನು ನೀಡಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದನ್ನು ನನ್ನ ಮಾಹಿತಿಯ ಮೇರೆಗೆ ನನ್ನ ವಕೀಲರು ತಯಾರಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯವಾಗಿರುತ್ತವೆ. ಅದಕ್ಕೆ ನಾನು ನನ್ನ ಸಹಿಗಳನ್ನು ಹಾಕಿರುತ್ತೇನೆ. ಈ ಕೆಳಗಿನ ದಾಖಲೆಗಳನ್ನು ನಿಶಾನೆಗಳಾಗಿ ಹಾಜರುಪಡಿಸಿರುತ್ತೇನೆ.

ಅಧಿಕಾರ ಪತ್ರ ನೋಟರಿ ದೃಢೀಕೃತದ ಪತ್ರದ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ1 ಎಂದು, ಆರೋಪಿ ನೀಡಿದ ಒಂದು ಚೆಕ್ ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಮತ್ತು ಆರೋಪಿಯ ಸಹಿಯನ್ನು ನಿಪಿ-2(ಎ) ಎಂದು, ಬ್ಯಾಂಕ್‌ನವರು ನೀಡಿದ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು, ಆರೋಪಿಗೆ ವಕೀಲರ ಮುಖಾಂತರ ನೀಡಿದ ನೋಟೀಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ನೋಟೀಸು ಜಾರಿಯಾದ ನೋಟೀಸಿನ ಕಛೇರಿ ಪ್ರತಿಯನ್ನು ನಿಪಿ-4 ಎಂದು, ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-5 ಎಂದು, ಅಂಚೆ ಸ್ವೀಕೃತಿಯನ್ನು ಹಾಜರಿ ಪಡಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

ಆದ್ದರಿಂದ ಆರೋಪಿಯ ವಿರುದ್ಧ ಕಾನೂನಿನನ್ವಯ ಸೂಕ್ತಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥನೆ..

(ಆರೋಪಿ ಪರ ವಕೀಲರು ಪಾಟಿ ಸವಾಲಿಗೆ ಅನುಮತಿ ಕೋರಿ ಎನ್ ಐ ಆಕ್ಟ್ ಕಲಂ 145 ರಡಿಯಲ್ಲಿ ಯಾವುದೇ ಅರ್ಜಿಯನ್ನು ಸಲ್ಲಿಸದೆ ಇದ್ದ ಕಾರಣ ಪಾಟಿ ಸವಾಲು ಇರುವುದಿಲ್ಲವೆಂದು ಪರಿಗಣಿಸಲಾಯಿತು. )

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಸಹಿ/-
(ಸಂತೋಷ ಕೊಠಾರಿ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ